# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 521 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ.ಎಲ್ ಅನಿಲ್ ಕುಮಾರ್ |
| ಉತ್ತರಿಸುವ ದಿನಾಂಕ | : | 16-09-2022 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸಲಾಗುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಶೌಚಾಲಯಗಳು ಸೇರಿದಂತೆ ಮೂಲಭೂತ ಸೌಕರ್ಯಗಳ ಕೊರತೆ, ಕಳಪೆ ಗುಣಮಟ್ಟದ ಆಹಾರ ಸರಬರಾಜು ಮುಂತಾದ ಸಮಸ್ಯೆಗಳ ಬಗ್ಗೆ ಸರ್ಕಾರದಿಂದ ಸಮಗ್ರವಾಗಿ ಸಮೀಕ್ಷೆ ನಡೆಸಲಾಗಿದೆಯೇ; ಪ್ರಸ್ತಾಪಿತ ಸಮಗ್ರ ಸಮೀಕ್ಷೆಯನ್ನು ನ್ಯಾಯಾಲಯದ ನಿರ್ದೇಶನದ ಮೇರೆಗೆ ನಡೆಸಲಾಗುತ್ತಿದೆಯೇ; (ಸಂಪೂರ್ಣವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ಸಕಇ 191 ಪಕವಿ 2019 ಬೆಂಗಳೂರು ದಿನಾಂಕ:03.03.2020 ರ ಆದೇಶದಂತೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿನ ಸೌಲಭ್ಯ ಹಾಗೂ ಸುರಕ್ಷತೆಯ ಕುರಿತು ಪ್ರಶ್ನಾವಳಿಗಳ ನಮೂನೆಗಳಲ್ಲಿ ಆಯಾ ಜಿಲ್ಲೆಗಳಲ್ಲಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ನಿಗದಿತ ನಮೂನೆಗಳಲ್ಲಿ ವರದಿ ಪಡೆಯಲಾಗಿರುತ್ತದೆ ಹಾಗೂ ನ್ಯಾಯಾಲಯದ ನಿರ್ದೇಶನದ ಮೇರೆಗೆ ಕ್ರಮಬದ್ಧವಾಗಿ ನಡೆಸಲು ಎಲ್ಲಾ ಜಿಲ್ಲೆಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. |
| ಆ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸಲಾಗುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಹಲವಾರು ಕಡೆ ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಇನ್ನಿತರೆ ಸಮಸ್ಯೆಗಳಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಸಮಸ್ಯೆಗಳನ್ನು ನಿವಾರಣೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ತಾಲ್ಲೂಕುವಾರು ಕ್ರಮ ಕೈಗೊಂಡ ಮಾಹಿತಿ ನೀಡುವುದು) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸಲಾಗುತ್ತಿರುವ ಎಲ್ಲಾ ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮವಹಿಸಲಾಗಿದೆ.<br><br>ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸ್ವಂತ ಕಟ್ಟಡಗಳಲ್ಲಿ ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ವಾಸದ ಕೊಠಡಿ/ ಶೌಚಾಲಯ/ ಸ್ನಾನಗೃಹಗಳ ನಿರ್ಮಾಣ ಹಾಗೂ ಅಗತ್ಯ ದುರಸ್ತಿ/ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಗೆ ರೂ.754.71 ಲಕ್ಷಗಳು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ರೂ.1792.96 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. |

| | | |
|---|---|---|
| | | ತಾಲ್ಲೂಕುವಾರು ವಿವರವನ್ನು ಅನುಬಂಧ-1ರಲ್ಲಿ ನೀಡಿದೆ.<br><br>ಅಲ್ಲದೇ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವ ಸಂಬಂಧ ಅಗತ್ಯವಿರುವ ಸಾಮಗ್ರಿಗಳಾದ ಯುಪಿಎಸ್, ವಾಟರ್ ಪ್ಯೂರಿಫೈರ್, ಲೈಬ್ರರಿ ಬುಕ್ಸ್, ಕ್ರೀಡಾ ಸಾಮಗ್ರಿಗಳು, ಇನ್ಸಿನೇಟರ್, ಬೆಂಕಿ ನಂದಿಸುವ ಉಪಕರಣ, ಕಂಪ್ಯೂಟರ್ ಲ್ಯಾಬ್‌ಗಳಿಗೆ ಕಂಪ್ಯೂಟರ್‌ಗಳು, ಪಾತ್ರೆ ಪರಿಕರಗಳು ಹಾಗೂ ಇತರೆ ತುರ್ತು ಸಾಮಗ್ರಿಗಳ ಖರೀದಿಗಾಗಿ ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ರೂ.1.75 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>ರಾಜ್ಯವಲಯದಿಂದ ವಿದ್ಯಾರ್ಥಿನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಮತ್ತು ಶಾಲಾ ಬ್ಯಾಗ್‌ಗಳನ್ನು ಸರಬರಾಜು ಮಾಡಲಾಗಿರುತ್ತದೆ.<br><br>ತಾಲ್ಲೂಕುವಾರು ವಿವರವನ್ನು ಅನುಬಂಧ-2ರಲ್ಲಿ ನೀಡಿದೆ. |

**ಸಕಇ 515 ಪಕವಿ 2022**

**(ಕೋಟ ಶ್ರೀನಿವಾಸ ಪೂಜಾರಿ)**
**ಸಮಾಜ ಕಲ್ಯಾಣ ಹಾಗೂ**
**ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು**

# ಅನುಬಂಧ-1

**ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸ್ವಂತ ಕಟ್ಟಡಗಳಲ್ಲಿ ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚುವರಿ ವಾಸದ ಕೊಠಡಿ/ ಶೌಚಾಲಯ/ ಸ್ನಾನಗೃಹಗಳ ನಿರ್ಮಾಣ ಹಾಗೂ ಅಗತ್ಯ ದುರಸ್ತಿ/ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕಳೆದ ಮೂರು ವರ್ಷಗಳಲ್ಲಿ ಮಂಜೂರಾತಿ ನೀಡಿರುವ ಬಿಡುಗಡೆ ಮಾಡಿರುವ ಅನುದಾನದ ತಾಲ್ಲೂಕುವಾರು ವಿವರ.**

**ರೂ.ಲಕ್ಷಗಳಲ್ಲಿ**

| ಕ್ರ. ಸಂ. | ತಾಲ್ಲೂಕು | ಹೆಚ್ಚುವರಿ ವಾಸದ ಕೊಠಡಿ/ ಶೌಚಾಲಯ/ ಸ್ನಾನಗೃಹಗಳ ನಿರ್ಮಾಣ | | ದುರಸ್ತಿ/ ಉನ್ನತೀಕರಣ ಕಾಮಗಾರಿಗಳು | | ಒಟ್ಟು | |
|---|---|---|---|---|---|---|---|
| | | ಮಂಜೂರಾತಿ ಮೊತ್ತ | ಬಿಡುಗಡೆ ಮಾಡಿದ ಮೊತ್ತ | ಮಂಜೂರಾತಿ ಮೊತ್ತ | ಬಿಡುಗಡೆ ಮಾಡಿದ ಮೊತ್ತ | ಮಂಜೂರಾತಿ ಮೊತ್ತ | ಬಿಡುಗಡೆ ಮಾಡಿದ ಮೊತ್ತ |
| **ಕೋಲಾರ ಜಿಲ್ಲೆ** | | | | | | | |
| 1 | ಬಂಗಾರಪೇಟೆ | 62.30 | 62.30 | 84.00 | 84.00 | **146.30** | **146.30** |
| 2 | ಕೋಲಾರ | 0.00 | 0.00 | 140.20 | 82.70 | **140.20** | **82.70** |
| 3 | ಮಾಲೂರು | 144.30 | 144.30 | 0.00 | 0.00 | **144.30** | **144.30** |
| 4 | ಮುಳಬಾಗಿಲು | 0.00 | 0.00 | 325.00 | 179.25 | **325.00** | **179.25** |
| 5 | ಶ್ರೀನಿವಾಸಪುರ | 231.23 | 115.61 | 91.10 | 86.55 | **322.33** | **202.16** |
| | **ಒಟ್ಟು** | **437.83** | **322.21** | **640.30** | **432.50** | **1078.13** | **754.71** |
| **ಚಿಕ್ಕಬಳ್ಳಾಪುರ ಜಿಲ್ಲೆ** | | | | | | | |
| 1 | ಬಾಗೇಪಲ್ಲಿ | 381.04 | 381.04 | 108.83 | 89.61 | **489.87** | **470.65** |
| 2 | ಚಿಕ್ಕಬಳ್ಳಾಪುರ | 0.00 | 0.00 | 14.60 | 14.60 | **14.60** | **14.60** |
| 3 | ಚಿಂತಾಮಣಿ | 263.65 | 263.65 | 120.56 | 120.56 | **384.21** | **384.21** |
| 4 | ಗೌರಿಬಿದನೂರು | 185.40 | 185.40 | 403.13 | 403.13 | **588.53** | **588.53** |
| 5 | ಗುಡಿಬಂಡೆ | 98.30 | 49.15 | 0.00 | 0.00 | **98.30** | **49.15** |
| 6 | ಶಿಡ್ಲಘಟ್ಟ | 143.77 | 143.77 | 142.05 | 142.05 | **285.82** | **285.82** |
| | **ಒಟ್ಟು** | **1072.16** | **1023.01** | **789.17** | **769.95** | **1861.33** | **1792.96** |

## ಅನುಬಂಧ-2

**ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ವಿದ್ಯಾರ್ಥಿನಿಲಯಗಳಿಗೆ ರಾಜ್ಯವಲಯದಿಂದ ಈ ಕೆಳಕಂಡಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.**

| ಕ್ರ. ಸಂ | ತಾಲ್ಲೂಕುವಾರು ವಿವರ | ಟೂ ಟಯರ್ ಕಾಟ್ | ಡ್ರೈನಿಂಗ್ ಟೇಬಲ್ | ಸೋಲಾರ್ ವಾಟರ್ ಹೀಟರ್ | | ಕಾಯರ್ ಮ್ಯಾಟ್ರಸ್ | ಡೀಸೆಲ್ ಜನರೇಟರ್ | ಶಾಲಾ ಬ್ಯಾಗ್ | ಸಿಸಿಟಿವಿ |
|---|---|---|---|---|---|---|---|---|---|
| | | | | 1000 LPH | 500 LPH | | | | |
| | **ಕೋಲಾರ ಜಿಲ್ಲೆ** | | | | | | | | |
| **1** | ಕೋಲಾರ | 35 | 160 | 7 | 2 | 666 | 13 | 563 | 0 |
| **2** | ಮಾಲೂರು | 121 | 0 | 0 | 0 | 774 | 3 | 498 | 0 |
| **3** | ಮುಳಬಾಗಿಲು | 95 | 34 | 4 | 1 | 484 | 10 | 735 | 0 |
| **4** | ಶ್ರೀನಿವಾಸಪುರ | 148 | 0 | 2 | 2 | 544 | 6 | 678 | 1 |
| **5** | ಬಂಗಾರಪೇಟೆ | 135 | 0 | 5 | 4 | 264 | 16 | 920 | 1 |
| | **ಒಟ್ಟು :-** | **534** | **194** | **18** | **9** | **2732** | **48** | **3394** | **2** |
| | **ಚಿಕ್ಕಬಳ್ಳಾಪುರ ಜಿಲ್ಲೆ** | | | | | | | | |
| **1** | ಚಿಕ್ಕಬಳ್ಳಾಪುರ | 252 | 0 | 4 | 0 | 698 | 5 | 315 | 5 |
| **2** | ಗೌರಿಬಿದನೂರು | 37 | 78 | 0 | 0 | 156 | 5 | 669 | 12 |
| **3** | ಗುಡಿಬಂಡೆ | 62 | 0 | 0 | 0 | 466 | 1 | 385 | 1 |
| **4** | ಶಿಡ್ಲಘಟ್ಟ | 121 | 0 | 0 | 0 | 128 | 3 | 685 | 0 |
| **5** | ಬಾಗೇಪಲ್ಲಿ | 65 | 55 | 0 | 0 | 322 | 3 | 167 | 8 |
| **6** | ಚಿಂತಾಮಣಿ | 261 | 174 | 1 | 1 | 522 | 3 | 949 | 18 |
| | **ಒಟ್ಟು :-** | **798** | **307** | **5** | **1** | **2292** | **20** | **3170** | **44** |